ಪೊಲೀಸ್ ಇಲಾಖಾ.

ನೋಟಿಸ್.

ತಾರೀಖು 11ನೆ ಏಪ್ರಿಲ್ 1907.

ತಾರೀಖು 11—4—1907ರಲ್ಲಿ ಬಂದು ನೂರು ರೂಪಾಯಿನ ಮುತ್ತು T. A 00967 (ಮುದ್ರಾಸ್ ಸರ್ಕಲ್) ನಂಬರಿನ ನೋಟು ಬಂದನ್ನು ಚನ್ನಪಟ್ಟಣ ತಾಲ್ಲೂಕು ಕಿರಸ್ತೆದಾರ್ ಹಾಲಿ ಬೆಂಗಳೂರು ತಾಲ್ಲೂಕಿನಲ್ಲಿ ನೇಮಕಾನ ಅಫಿಸರಾಗಿರುವ ಮೈ॥ಬೆಂ ಹಟೇಶಮೂರ್ತಿರಾಯರು ಕಳ್ಳರುಕೊಂಡಿರುತ್ತಾರೆ. ಸದರಿ ನೋಟು ಯಾರಲ್ಲಿ ಕೀರುತ್ತೆ ಮುತ್ತು ಅವರಲ್ಲಿ ಹ್ಯಾಗೆ ಬಂತೆಂಬುದಾಗಲಿ ತಿಳಿಸತಕ್ಕ ವರಿಗೆ 10 ರೂಪಾಯಿ ಇನಾಂ ಕೊಡುವದಾಗಿ ಸಹಾ ತಿಳಿಸುತ್ತಾರೆ. ನೋಟಿನ ಸಂಬಂಧವಾಗಿ ತಿಳಿಯಬರುವ ಸಂಗತಿ ಬೆಂಗಳೂರು ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟರವರಿಗೆ ತಿಳಿಸುವುದಕ್ಕೆ ತಕ್ಕದ್ದು.

ಎಲ್. ಕೃಷ್ಣರಾವ್,
ಸೂಪರಿಂಟೆಂಡೆಂಟ್, ಬೆಂಗಳೂರು ಡಿಸ್ಟ್ರಿಕ್ಟ್.

ಕೋ-ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರವರ ಆಫೀಸ್.

ನೋಟಿಫಿಕೇಷನ್, ನಂ. 322—C. S., ತಾರೀಖು 17-18ನೆ ಏಪ್ರಿಲ್ 1907.

ಈ ಕೆಳಗೆ ನಮೂದಿಸಿರುವ ಕೋ-ಆಪರೇಟಿವ್ ಸೊಸೈಟಿಯು 1905ನೆ ಇಸವಿಯ ಮೈಸೂರು ಕೋ-ಆಪರೇಟಿವ್ ಸೊಸೈಟಿಗಳ್ಯರಗ್ಯುಲೇಷನ್ 6ನೆ ಸೆಕ್ಷನ್ (2)ನೆ ಖಂಡ ಪ್ರಕರಣಕ್ಕನುಸಾರವಾಗಿ ರಿಜಿಸ್ಟರ್ ಮಾಡಲ್ಪಟ್ಟಿರುತ್ತೆ: —

ಹೆಸರು.	ಸ್ಥಳ.	ರಿಜಿಸ್ಟರು ಆದ ತಾರೀಖು.
ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್, ಲಿಮಿಟೆಡ್, ಬೆಂಗಳೂರು.	ಬೆಂಗಳೂರು ಸಿಟಿ ...	6ನೆ ಏಪ್ರಿಲ್ 1907.

ಎಂ. ಶಾಮರಾವ್,
ರಿಜಿಸ್ಟ್ರಾರ್, ಕೋ-ಆಪರೇಟಿವ್ ಸೊಸೈಟೀಸ್, ಇನ್ ಮೈಸೂರು.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ಇಸ್ತೆಹಾರ್ ತಾರೀಖು 29ನೆ ಮಾರ್ಚ್ 1907.

ಸ॥1907ನೆ ಇಸವಿ ಜುಲೈ ಮಾಹೆ ತಾರೀಖು 1ರ ಲಾಗಾಯಿತು 1908ನೆ ಇಸವಿ ಜೂನ್ ಮಾಹೆ (ತಾರೀಖು 30ರ ವರಿಗೆ ಈ ಕೆಳಗಿನ ಎ ಷೆಡ್ಯೂಲಿನಲ್ಲಿ ನಮೂದಿಸುವ ಮೈಸೂರು ಸಿಟಿಗೆ ಸೇರಿದ ತಮಾಂ ಟೋಲ್ ಗೇಟುಗಳ ಮುಖಾಂತ್ರ ಸಿಟಿ ವಳಕ್ಕೆ ಬರುವ ಗಾಡಿಗಳು, ಜಾನವಾರುಗಳು, ವಗೈರೆಗಳ ಮೇಲೆ ಬಿ ಷೆಡ್ಯೂಲಿನಲ್ಲಿ ನಮೂದಾಗುವ ದರವರತೆ ಸಿಟಿ ಮ್ಯುನಿಸಿಪಲ್ ರೆಗ್ಯುಲೇಷನ್ 78 ಮತ್ತು 79ನೆ ಸೆಕ್ಷನ್‌ಗಳಲ್ಲಿ ನಮೂದಿಸುವ ಷರತ್ತು ಗಳಿಗೆ ವಳಪಡಿಸಿ ಪ್ರತಿ ಬಂದು ಟೋಲ್ ಗೇಟನ್ನಲ್ಲಿಯಾಗಲೀ ಅಥವಾ ದರೋಬಸ್ತು ಗೇಟುಗಳಲ್ಲಿಯಾಗಲಿ ಟೋಲು ವಸೂಲ್ಮಾಡುವ ಬಾಬನ್ನು 1907ನೆ ಇಸವಿ ಮೇ ತಾರೀಖು 20ನೆ ಮಧ್ಯಾಹ್ನ 1 ಘಂಟೆ ಲಾಗಾಯಿತು ರಂಗಾಚಾರ್ಲು ಯವರ ಮೆಮೋರಿಯಲ್ ಹಾಲಿನಲ್ಲಿ ಪ್ರಸಿಡೆಂಟರವರಿಂದ ಯಾ ಅವರಿಂದ ಸ್ಪೆಷಲ್ ಆಗಿ ನೇಮಿಸಲ್ಪಟ್ಟ ಇತರ ಆಫಿಸರವರಿಂದ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟರು ಬಿ ಷೆಡ್ಯೂಲಿನಲ್ಲಿ ನಮೂದಾಗುವ ರೇಟನಂತೆಯೇ ಗೇಟುಗಳ ಮುಖಾಂತರ ಸಿಟಿ ವಳಕ್ಕೆ ಬರುವ ಗಾಡಿ ವಗೈರೆಗಳ ಮೇಲೆ ಟೋಲ್ ವಸೂಲ್ಮಾಡಬೇಕು ಹೆಚ್ಚು ರೇಟನ್ನು ವಸೂಲ್ಮಾಡ ಕೂಡದು. ಇವಾಯಿ ಪ್ರಸಿಡೆಂಟರವರಿಂದ ವಿಧಾಯಕ ಮಾಡಲ್ಪಡುವ ಫಾರಂನಲ್ಲಿ ಕ್ರಮವಾಗಿ ಸಾಲ್ ಮಾಹೆ ತಾರೀಖು ನಿಕಟೋಲು ಪಾವತಿ ಮಾಡತಕ್ಕ ಆಸಾಮಿಗಳಿಗೆ ರಕೀದಿ ಕೊಡಬೇಕು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ತೊಂದು ದರವನ್ನೇ ಆಗಲೀ ಮಂಜೂರು ಮಾಡುವ ಅಧಿಕಾರವು ಪ್ರಸಿಡೆಂಟರವರಲ್ಲಿ ಇರುತ್ತದೆ.

4. ಪ್ರತಿ ತಿಂಗಳು 10ನೆ ತಾರೀಖು ವಳಗಾಗಿ ಹಿಂದಣ ಮಾಹೆಯ ಖಿಸ್ತು ಮೊಬಲಗನ್ನು ಸಾವತಿ ಮಾಡಬೇಕು. ಹರಾಜು ಖೈದಾದ ಕೂಡಲೆ ಬಾಬನ್ನು ಪಡೆಯತಕ್ಕ ಕಂಟ್ರಾಕ್ಟರು ಎರಡು ಮಾಹೆಗಳ ಖಿಸ್ತಿಗೆ ಸವಮಾಣ ಮೊಬಲಗನ್ನು ಡಿಪಾಜಿಟ್ ಬಗ್ಗೆ ಹಾಜರ್ಮಾಡಬೇಕು. ಷರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ ಡಿಪಾಜಿಟ್ಟನಲ್ಲಿರುವ ಮೊಬಲಗನ್ನು ಆಫೀಸರು ಎರಡು ಮಾಹೆಗಳ ಖಿಸ್ತು ಬಗ್ಗೆ ಜಮೆಗೆ ತೆಗೆದುಕೊಳ್ಳುತ್ತೆ.

5. ಹರಾಜು ಖೈದಾದಕೂಡಲೆ ಡಿಪಾಜಿಟ್ ಬಗ್ಗೆ ಮೊಬಲಗನ್ನು ಹಾಜರ್ಮಾಡದೆ ಇದ್ದರೆ ಖರ್ಚಿಗೂ ಮತ್ತು ಲುಕ್ಸಾನಿಗೂ ಅವಲ್ ಕಂಟ್ರಾಕ್ಟ್‌ದಾರನನ್ನು ಗುರಿಪಡಿಸಿ ಪುನಹ ಹರಾಜು ಮಾಡಿಸುತ್ತೆ. ಖಿಸ್ತು ಮೊಬಲಗು ವಾಯಿದೆ ವಳಗೆ ಹಾಜರ್ಮಾಡಲು ತಪ್ಪಿದರೆ ಡಿಪಾಜಿಟ್ ಮೊಬಲಗನ್ನು ದಂಡವಾಗಿ ತೆಗದುಕೊಂಡು ಬಾಬನ್ನು ದುಸರಾ ಹರಾಜು ಮಾಡಿಸಿ ಆದರಲ್ಲಿ ನಷ್ಟವೇನಾದರೂ ಆದಲ್ಲಿ ಆ ನಷ್ಟಕ್ಕೆ ಅವಲ್ ದರಖಾಸ್ತುದಾರನನ್ನು ಗುರಿಪಡಿಸುತ್ತೆ. ಎರಡನೆ ಹರಾಜಿನಲ್ಲಿ ನಫ ಬಂದಲ್ಲಿ ಮೊದಲು ದರಖಾಸ್ತುದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲ.

6. ಪ್ರತಿ ಒಬ್ಬ ಕಂಟ್ರಾಕ್ಟರು ರೋಜೀನಾ ಟೋಲು ಗೇಟುಗಳ ಮುಖಾಂತ್ರ ಪ್ರವೇಶವಾಹುವ ತರಹಾವಾರಿ ಗಾಡಿಯಾ ಜಾನವಾರುಗಳು ಇವುಗಳ ಮೇಲೆ ವಸೂಲಾವ ಟೋಲ್ ಯಾನೆ ಸುಂಕ ಇವುಗಳ ತಪ್ಪಿಸಲು ತೋರಿಸುವ ಲೆಕ್ಕವನ್ನು ಪೈಸಿಡೆಂಟರವರು ವಿಧಾಯಕ ಮಾಡುವ ನಮೂನೆಯಲ್ಲಿಟ್ಟು ಅಂಥಾ ಲೆಕ್ಕವನ್ನು ಕಂಟ್ರಾಕ್ಟರು ಪ್ರತಿ ಮಾಹೆಯಲ್ಲಿಯೂ ಪ್ರಸಿಡೆಂಟರವರ ಇನ್‌ಸ್ಪೆಕ್ಷನ್ ಬಗ್ಗೆ ಹಾಜರ್ಮಾಡಬೇಕು. ಇವಾಯಿ ಸಾಯರು ಅಥವಾ ಮ್ಯುನಿಸಿಪಲ್ ಉದ್ಯೋಗಸ್ಥರು ಅಪೇಕ್ಷಿಸಿದಾಗ ಅಂಥಾ ಲೆಕ್ಕಗಳನ್ನು ಅವರ ಇನ್‌ಸ್ಪೆಕ್ಷನ್ ಬಗ್ಗೆ ಹಾಜರ್ಮಾಡುವದಕ್ಕು ಬದ್ಧನಾಗಿರತಕ್ಕದ್ದು.